Ex. P. No. 46/2022

ಪಿ.ಡಬ್ಲ್ಯೂ.01

ದಿನಾಂಕಃ 01.08.2024
ಸಾಕ್ಷಿಗೆ ಪ್ರತಿಜ್ಞಾವಿಧಿ ಭೋದಿಸಲಾಯಿತು.

**ಪಾಟಿ ಸವಾಲುಃ  ಎದುರುದಾರ ಪರ ವಕೀಲರಿಂದ ಃ**

ಈ ಪ್ರಕರಣವನ್ನು ಯಾರ ವಿರುದ್ಧ ಸಲ್ಲಿಸಿರುತ್ತೇನೆ ಎಂದು ನನಗೆ ಗೊತ್ತಿರುತ್ತದೆ.  ನಾನು ಭೀಮರಾಯ ತಳವಾರ ಇವರ ವಿರುದ್ಧ ಸಲ್ಲಿಸಿರುತ್ತೇನೆ.

ಪ್ರ. ಎದುರುದಾರರ ವಿರುದ್ಧ ನಿಮ್ಮದು ಏನು ಪರಿಹಾರ ಇದೆ ?

ಉ. ಅವರ ವಿರುದ್ಧ ನನ್ನದು ಪರಿಹಾರ ಏನೂ ಇರುವುದಿಲ್ಲ.

ನಾನು ದಾವಾ ಆಸ್ತಿಯ ಕಬ್ಜೆಯಲ್ಲಿ ಇರುತ್ತೇನೆ.  ನಾನು ದಾವಾ ಆಸ್ತಿಯನ್ನು ವಕೀಲರ ಪತ್ನಿಯ ಹೆಸರಿಗೆ ಮಾರಾಟ ಮಾಡಿರುತ್ತೇನೆ.  ನಾನು ಶ್ರೀಮತಿ. ಶೋಭಾ ಗಂಡ ಸಾಲೋಮನ್ ಅಲ್ಫ್ರೆಡ್ ಇವರಿಗೆ ಮಾರಾಟ ಮಾಡಿರುತ್ತೇನೆ ಅಂದರೆ ಸರಿ.  ಅವರಿಗೆ ನಾನು 04 ಎಕರೆ ಜಮೀನನ್ನು ಮಾರಾಟ ಮಾಡಿರುತ್ತೇನೆ. ಸದರಿ ಜಮೀನನ್ನು ಎಕರೆಗೆ 10 ಸಾವಿರ ರೂಪಾಯಿಯಂತೆ ಮಾರಾಟ ಮಾಡಿರುತ್ತೇನೆ.  ಸದರಿ ನಾನು ಮಾರಾಟ ಮಾಡಿದ 4 ಎಕರೆ ಜಮೀನಿನ ಮಾಲೀಕರು ಮತ್ತು ಕಬ್ಜೆದಾರರು ಶ್ರೀಮತಿ. ಶೋಭಾ  ಅವರು ಇರುತ್ತಾರೆ. ಸದರಿ ಜಮೀನನ್ನು ನಾನು ಮಾರಾಟ ಮಾಡಿರುವುದಕ್ಕೆ ನನಗೆ ಯಾರೂ ತಕರಾರು ಮಾಡಿರುವುದಿಲ್ಲ.  ನಾನು ಮಾರಾಟ ಮಾಡಿದ ಜಮೀನನ್ನು ಬಿಟ್ಟು ಉಳಿದ ಜಮೀನಿಗೂ ಸಹ  ಯಾರೂ ಅಡಚಣೆ ಉಂಟು ಮಾಡಿರುವುದಿಲ್ಲ ಅಂದರೆ ಸರಿಯಲ್ಲ.  ಸಾಕ್ಷಿ ಸ್ವತಃ ಮುಂದುವರೆದು ಕೊಡಲಿ, ಕುಡಗೋಲು, ಬಡಿಗೆ ತೆಗೆದುಕೊಂಡು ಬಂದು, ನನಗೆ ಅಡಚಣೆ ಉಂಟು ಮಾಡಿರುತ್ತಾರೆ.  ಸದರಿ ಜಮೀನಿನಲ್ಲಿ ನಾನು ಗಳೆ ಎಲ್ಲ ಹೊಡೆದು ಬಿತ್ತುವುದಕ್ಕೆ ರಡಿ ಮಾಡಿರುತ್ತೇನೆ, ಆದರೆ ಇನ್ನೂ ಬಿತ್ತಿರುವುದಿಲ್ಲ.  ಕೊಡಲಿ, ಕುಡಗೋಲು, ಬಡಿಗೆ ತೆಗೆದುಕೊಂಡು ಕಳೆದ ವರ್ಷ ಬಂದಿದ್ದರು.  ಅವರು ನನಗೆ ಹೊಡೆದಿರುವುದಿಲ್ಲ, ಆದರೆ ಬೆದರಿಕೆ ಹಾಕಿರುತ್ತಾರೆ. ನನ್ನ ಜಮೀನಿನ ಪಶ್ಚಿಮ ಭಾಗದಲ್ಲಿನ 4 ಎಕರೆ ಜಮೀನ್ನು ಶ್ರೀಮತಿ. ಶೋಭಾ ಅವರಿಗೆ ಮಾರಾಟ

ಮಾಡಿರುತ್ತೇನೆ. ಸದರಿ ಮಾರಾಟ ಮಾಡಿದ ಜಮೀನಿನ ಪೂರ್ವಕ್ಕೆ - ಸ.ನಂ. 253/4, ಪಶ್ಚಿಮಕ್ಕೆ - ಸ.ನಂ. 253/2, ಉತ್ತರಕ್ಕೆ- ಸ.ನಂ. 253/5 ಹಾಗೂ ದಕ್ಷಿಣಕ್ಕೆ - ಸ.ನಂ.249/2 ಮತ್ತು 250/1 ಇರುತ್ತದೆ ಅಂದರೆ ಸರಿ. ಸ.ನಂ. 253/3 ರಲ್ಲಿ ಎಷ್ಟು ಎಕರೆ ಜಮೀನು ಇರುತ್ತದೆ ಎಂದು ನನಗೆ ಗೊತ್ತಿಲ್ಲ.

ಈ ಹಿಂದೆಯೂ ನಾನು ಪೊಲೀಸ್ ರಕ್ಷಣೆ ಕೋರಿ ಅರ್ಜಿ ಸಲ್ಲಿಸಿದ್ದೆ ಅಂದರೆ ಸರಿ. ನಾನು ಈ ಹಿಂದೆ ಸಲ್ಲಿಸಿದ ಅರ್ಜಿಯಲ್ಲಿ ಕಾಣಿದ ವಿಷಯವನ್ನೇ ಈ ಅರ್ಜಿಯಲ್ಲಿಯೂ ಸಹ ಬರೆದಿರುತ್ತೇನೆ ಅಂದರೆ ಸರಿ. ನಾನು ಈ ಹಿಂದೆ ಸಲ್ಲಿಸಿದ ಅರ್ಜಿ ವಜಾಗೊಂಡಿತ್ತು ಅಂದರೆ ಸರಿ. ಎದುರುದಾರರು ಬಡಿಗೆ ಮತ್ತು ಕೊಡಲಿ ತೋರಿಸಿ ಜೋರಾಗಿ ಒದರಾಡಿದರು. ಅದಕ್ಕೆ ನಾನು ಅಂಜಿ ವಾಪಸ್ ಬಂದಿರುತ್ತೇನೆ. ಆ ಘಟನೆ ಯಾವ ತಾರೀಖಿನಂದು ನಡೆಯಿತು ಎಂದು ನನಗೆ ತಾರೀಖ್ ಹೇಳಲು ಆಗುವುದಿಲ್ಲ. ನಾನು ಯಾವ ತಾರೀಖಿನಂದು ಘಟನೆ ನಡೆದಿರುತ್ತದೆ ಎಂದು ನಮ್ಮ ವಕೀಲರಿಗೆ ತಾರೀಖು ಹೇಳಿರುವುದಿಲ್ಲ. ಯಾವ ತಾರೀಖಿನಂದು ನಾನು ಪೊಲೀಸ್ ಠಾಣೆಗೆ ಹೋಗಿದ್ದೆ ಎಂದು ನನಗೆ ತಾರೀಖ್ ನೆನಪಿರುವುದಿಲ್ಲ. ಆ ದಿನ ಹಳ್ಳದ ತಗ್ಗಿನಲ್ಲಿ ನಿಂತು ಒದರಾಡಿದ ವ್ಯಕ್ತಿಗಳು ನನಗೆ ಕಾಣಿಸಿರಲಿಲ್ಲ, ಆದರೆ ಆ ವ್ಯಕ್ತಿಗಳು ಎದುರುದಾರರೇ ಇದ್ದಿರಬಹುದು ಎಂದು ನಾನು ಭಾವಿಸಿರುತ್ತೇನೆ. ಎದುರುದಾರರು ನನಗೆ ಬೈದಿರುವುದಿಲ್ಲ ಮತ್ತು ನನ್ನ ತಂಟೆಗೆ ಬಂದಿರುವುದಿಲ್ಲ ಅಂದರೆ ಸರಿಯಲ್ಲ.

ಆ ದಿನ ಎದುರುದಾರರೇ ಬಂದಿದ್ದರು ಎಂದು ತೋರಿಸಲು ನಾನು ಅವರ ಫೋಟೋ ತೆಗೆದು ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ. ಆ ದಿನ ಘಟನೆ ಮಧ್ಯಾಹ್ನದ ಸಮಯದಲ್ಲಿ ನಡೆದಿರುವುದರಿಂದ ಅಕ್ಕ-ಪಕ್ಕದ ಹೊಲದಲ್ಲಿ ಯಾರೂ ಇರಲಿಲ್ಲ. ಆಗ ಬೇಸಿಗೆ ಕಾಲ ಇದ್ದಿದ್ದರಿಂದ ಅಕ್ಕ-ಪಕ್ಕದ ಹೊಲದಲ್ಲಿ ಯಾರೂ ರೈತರು ಇರಲಿಲ್ಲ. ಘಟನೆಯು ನಡೆದ 4-5 ದಿನಗಳ ಬಳಿಕ ಈ ಅರ್ಜಿಯನ್ನು ಸಲ್ಲಿಸಿರುತ್ತೇನೆ. ನಾನು ಹೇಳುವಂತೆ ಎದುರುದಾರರು ಬೇಸಿಗೆಯಲ್ಲಿ ಆಗಲಿ, ಅಥವಾ ಪ್ರಕರಣದಲ್ಲಿ ನಮೂದಿಸಿರುವ ದಿನಾಂಕದಂದು ಆಗಲೀ ಅಥವಾ ಈ ಅರ್ಜಿಯನ್ನು ಸಲ್ಲಿಸುವ 4-5 ದಿನಗಳ ಮುಂಚೆ ಆಗಲಿ, ಎದುರುದಾರರು

ನಮ್ಮ ಹೊಲಕ್ಕೆ ಬಂದಿರಲಿಲ್ಲ ಮತ್ತು ಯಾವುದೇ ಗಲಾಟೆ ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ಎದುರುದಾರರು ನನಗೆ ಯಾವುದೇ ರೀತಿಯಿಂದ ಹಲ್ಲೆ ಮಾಡಿರುವುದಿಲ್ಲ ಮತ್ತು ಬಿದರಿಕೆ ಹಾಕಿರುವುದಿಲ್ಲ ಅಂದರೆ ಸರಿಯಲ್ಲ. ನಾನು ಯಾವತ್ತೂ ಪೊಲೀಸ್ ಠಾಣೆಗೆ ಹೋಗಿರಲಿಲ್ಲ ಅಂದರೆ ಸರಿಯಲ್ಲ. ನಾನು ಯಾವ ತಿಂಗಳಿನಲ್ಲಿ ಪೊಲೀಸ್ ಠಾಣೆಗೆ ಹೋಗಿದ್ದೆನು ಎಂದು ನನಗೆ ತಿಂಗಳಿನ ಹೆಸರು ಹೇಳಲು ಬರುವುದಿಲ್ಲ. ನಾನು ಪೊಲೀಸ್ ಠಾಣೆಗೆ ಹೋಗಿ ಅರ್ಜಿ ನೀಡಿದ್ದರ ಪ್ರತಿಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ.

ನಾನು ಎದುರುದಾರರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.